# ಜೀವದಯಾ ಕನಸು

ಈಗ ಆಚರಿಸುತ್ತಿರುವ ರಾಮನವಮಿ ಆಚರಣೆಗೂ ಈಗ್ಗೆ ಐವತ್ತು ಅರವತ್ತು ವರ್ಷಗಳ ಹಿಂದೆ ನಮ್ಮ ಕೇರಿಯವರೆಲ್ಲಾ ಸಾಮೂಹಿಕ ಆಚರಿಸುತ್ತಿದ್ದ ರಾಮನವಮಿಗೂ ಹೋಲಿಸಲಾಗದಷ್ಟು ಅಂತರವಿದೆ! ಶ್ರದ್ಧೆ, ದಯೆ, ಕರುಣೆ ಮತ್ತು ದೈವದ ಪರಿಮಳವಿಲ್ಲದ ಇಂದಿನ ತೋರಾಣಿಕೆಯ ಆಚರಣೆಗಳನ್ನು ನೋಡಿದರೆ ಮನಸ್ಸು ಮುದುಡಿಕೊಳ್ಳುತ್ತದೆ. ದೇವರ ಹೆಸರಿನಲ್ಲಿ ಬೀದಿಗಳ ಮೇಲೆ ನಡೆಯುತ್ತಿರುವ ಹಿಂಸೆ, ಹರಿಯುತ್ತಿರುವ ನೆತ್ತರನ್ನು ನೋಡಲು ನಾವು ಕಲ್ಲೆದೆಯವರಾಗಿರಬೇಕು! ಮುಂದೆ ನೂರು ವರ್ಷಗಳು ಅಥವಾ ಇನ್ನೂರು ವರ್ಷಗಳ ತರುವಾಯ ಈ ದೇಶಕ್ಕೆ ಬಂದ ಯಾವನಾದರೂ ಒಬ್ಬ ಪ್ರವಾಸಿ ಅಥವಾ ಕವಿ ಹೀಗೆ ಬರೆಯಬಹುದು '...ಆ ಹಬ್ಬದ ದಿನ ಇಲ್ಲಿನ ಬೀದಿಗಳಲ್ಲಿ ರಕ್ತ ಚೆಲ್ಲಿತ್ತು, ನನ್ನ ತುದಿಬೆರಳಿನಲ್ಲಿ ರಕ್ತವನ್ನು ಮುಟ್ಟಿದೆ, ದೇಹವೊಂದರಿಂದ ಆಗತಾನೆ ಹರಿದ ಹಸಿ ರಕ್ತ ತನ್ನ ಜಾತಿ, ಧರ್ಮವನ್ನು ಹೇಳಲಿಲ್ಲ! ಅದು ಹೇಳಿತು; ನಾನೊಬ್ಬ ಬಡವ ಎಂದು!' ಸಾಮೂಹಿಕ ಒಳಿತಿನ ಹಬ್ಬಗಳ ಮೂಲಕ ನಮ್ಮ ಸಾಮಾಜಿಕ ಬದುಕಿನಲ್ಲಿ ನಾವು ಏನೆಲ್ಲವನ್ನೂ ಕಳೆದುಕೊಳ್ಳುತ್ತಿದ್ದೇವೆ ಎಂದು ನೆನೆದರೆ ದಿಗಿಲಾಗುತ್ತದೆ!

ನಮ್ಮ ಮನೆಯೊಳಗಿನ ವಿಷಯಗಳಾಗಿದ್ದ ದೇವರು, ಧರ್ಮಗಳೆಲ್ಲ ಈಗ ಬೀದಿಗೆ ಬಂದು ಬಿದ್ದಿವೆ. ಯಾರು ಏನನ್ನು ತಿನ್ನುತ್ತಾರೆ, ಏನನ್ನು ಉಡುತ್ತಾರೆ ಅನ್ನುವುದೂ ಈಗ ನಡು ಬೀದಿಗೆ ಬಂದಿದೆ. ಸುಭಿಕ್ಷತೆಯ ದಿನಗಳಲ್ಲಿ ಬಡತನ ಇರಬಾರದು; ಆದರೆ ಬಡತನದಲ್ಲಿ ಸುಭಿಕ್ಷತೆ ಇರಬಹುದು! ಸುಭಿಕ್ಷತೆಯ ದಿನಗಳಲ್ಲಿ ನಡೆಯುತ್ತಿರುವ ದುರಂತಗಳೇ ಈಗ ನಮ್ಮನ್ನು ಎದೆಗುಂದಿಸುತ್ತಿವೆ. ಧರ್ಮ ಹಿಂಸೆಯನ್ನೇ ಪಥವನ್ನಾಗಿಸಿಕೊಂಡರೆ, ಅಂತಹ ಸಮಾಜದಲ್ಲಿ ದೇವರು ಇರಲಾರ! ಈಗ ಆಗುತ್ತಿರುವುದೂ ಕೂಡ ಇದೇ! ಮೊನ್ನೆ ದೇಶದ ಕೆಲವು ಭಾಗಗಳಲ್ಲಿ ಧಾರ್ಮಿಕ ಆಚರಣೆಯೊಂದರಲ್ಲಿ ನಡೆದ ಹಿಂಸೆ, ಸಾವು, ರಕ್ತಪಾತ ಕಂಡಾಗ ಶ್ರದ್ಧಾವಂತ ಆಸ್ತಿಕರ ಮನಸ್ಸೂ ಕೂಡ ಮುರುಟಿಹೋಯಿತು. 'ದೇವರು, ಅವನ ಭಕ್ತಿ, ಆರಾಧನೆ ಇವೆಲ್ಲ ಎಷ್ಟು ಪರಿಯಂತ ನಿತ್ಯ ಜೀವನದ ನಡವಳಿಕೆಗೆ ಬಾರದೆ, ಕೇವಲ ನಮ್ಮ ಅವನ ಮನೋಸಂಬಂಧವಾಗಿರುತ್ತದೋ, ಅಲ್ಲಿಯ ತನಕ ನಮ್ಮ ಬಾಳು ಏತರಿಂದಲೂ ವಿಸ್ತರಿಸುವಂತೆ ನನಗೆ ಕಾಣಿಸದು. ದೇವರಿರುವನೆನ್ನುವವನು ಬದುಕಿನಲ್ಲೆಲ್ಲ ಅದನ್ನು ಕಾಣದೆ, ತಿಳಿಯದೆ ಮಾಡುವ ಯಾವತ್ತೂ ಪೂಜೆಗಳಿಂದ ಏನೂ ಆಗುವಂತಿಲ್ಲ' (ಶಿವರಾಮ ಕಾರಂತ). ನಡೆಯುವವರಿಗೆ ಈ ದಾರಿಯೂ ಇದೆ. ಈ ದಾರಿಯಲ್ಲಿಯೂ ನಡೆದ ಉದಾರಚರಿತರು ನಮ್ಮ ನಡುವೆ ಇದ್ದಾರೆ. ಈ ವಿವೇಕ ಎಂದಿಗೆ ಸಮಾಜದ ಹೃದಯದಲ್ಲಿ ಉದಯವಾಗುವುದಿಲ್ಲವೋ, ಅಲ್ಲಿನವರೆಗೆ ಈ ಹಿಂಸೆ, ರಕ್ತಪಾತ ಮನುಕುಲದ ಕೈಗಳಿಗೆ ಅಂಟಿಕೊಂಡೇ ಇರುತ್ತದೆ!

ನಾಗರಿಕರ ಆರೋಗ್ಯ, ಆಹಾರ, ಶಿಕ್ಷಣ, ಉದ್ಯೋಗ, ಸುರಕ್ಷತೆ ಮುಂತಾದುವನ್ನು ಜನತೆಯಿಂದ ಆಯ್ಕೆಗೊಂಡ ಸರ್ಕಾರ ನಿರ್ವಹಿಸಬೇಕಾದ ಸಾರ್ವಜನಿಕ ಕರ್ತವ್ಯಗಳು. ಯಾವುದೇ ದೈವಿಕ ಶಕ್ತಿಗಳಿಂದ, ಪವಾಡಪುರುಷರಿಂದ ನಿರ್ವಹಿಸಲಾಗದ ಈ ಕ್ಷೇತ್ರಗಳು ಸಂಪೂರ್ಣವಾಗಿ ಸರ್ಕಾರದ ಯೋಜನೆಗಳಿಂದಲೇ ಅನುಷ್ಠಾನಗೊಳ್ಳಬೇಕು. ಜನತೆಯ ಒಳಿತಿಗಾಗಿ ಇರುವ ಇಂತಹ ಕರ್ಯಗಳನ್ನು ಧರ್ಮದ ಕೈಗಳಿಗೆ ಎಂದೂ ನೀಡಬಾರದು! ಸರ್ಕಾರ ನಿರ್ವಹಿಸಬೇಕಾಗಿರುವ ಕರ್ತವ್ಯಗಳೇ ಬೇರೆ; ಹಾಗೆಯೇ ಧರ್ಮ ನಿರ್ವಹಿಸಬೇಕಾದ ಕಾರ್ಯವೇ ಬೇರೆ! ಈಗಲಾದರೂ ಗಾಂಧೀಜಿಯ ಮಾತುಗಳು ನಮ್ಮ ಹೃದಯಕ್ಕೆ ಹತ್ತಿರವಾಗಬೇಕು 'ಏನೂ ಅರಿಯದದವರನ್ನು ದೇವರ ಹೆಸರಿನಲ್ಲಿ ಹಿಂಸಿಸುವುದಕ್ಕಿಂತ ಮಿಗಿಲಾದ ಪಾಪವನ್ನು ನಾನರಿಯೆ' ಈಗ ದೇಶಕ್ಕಾಗಿ ಏನನ್ನಾದರೂ ತ್ಯಾಗ ಮಾಡಬೇಕಾದ ಸಂದರ್ಭ ಬಂದರೆ; ಹಿಂಸೆ ಮತ್ತು ಅಸಹಿಷ್ಣುತೆಯನ್ನು ತ್ಯಾಗ ಮಾಡುವುದೇ ಎಲ್ಲಕ್ಕೂ ಮಿಗಿಲಾದ ತ್ಯಾಗ.

ಒಂದು ವಿಚಿತ್ರವಂತೂ ಕಣ್ಣಿಗೆ ಹೊಡೆದಂತೆ ಕಾಣುತ್ತಿದೆ, ಮನುಷ್ಯನಿಗೆ ನೋವೆಂಬುದು ಅಭ್ಯಾಸವಾಗಿ ಹೋದರೆ, ಅವನಿಗೆ ನೋವಾದರೂ ಅದು ನೋವೆನಿಸುವುದಿಲ್ಲ! ಈಗ ಆಗುತ್ತಿರುವುದೂ ಹೀಗೆಯೇ. ಬೀದಿಯಲ್ಲಿ ಅಸಹಾಯಕರ ರಕ್ತ ಚೆಲ್ಲುವುದು, ಮತ್ತೊಬ್ಬರ ಕಿಸೆಯಿಂದ ದೋಚುವುದು ಈ ಎಲ್ಲ ಮೃಗೀಯ ವರ್ತನೆಗಳೂ ಈಗ ಪಶ್ಚಾತ್ತಾಪವಿಲ್ಲದ ಸಾರ್ವಜನಿಕ ಕ್ರಿಯೆಗಳಾಗಿವೆ. ಆದರೆ ಇದೆಲ್ಲವನ್ನೂ ಅನುಭವಿಸುತ್ತಿರುವ ಬಡವರ ಕಣ್ಣೀರು ಬತ್ತಿದೆ. ಆದರೆ ಬಡವರ ಈ ಮೌನ ಬಲು ಅಪಾಯಕಾರಿ. ಬಡವರ ಹಸಿವಿನ ಕಣ್ಣುಗಳು ಕತ್ತಿಗಿಂತ ಹರಿತವಾಗಿರುತ್ತವೆ. ಸಾಮಾಜಿಕ ನ್ಯಾಯದ ಕಂದರ ದಿನೇ ದಿನೇ ದೊಡ್ಡದಾಗುತ್ತಿದೆ. ಕಣ್ಣ ಮುಂದಿನ ಈ ಸತ್ಯ ಕಹಿಯಾಗಿರಬಹುದು! ಆದರೆ ಇದು ಹಗಲಿನಷ್ಟೇ ನಿಚ್ಚಳ! ದ್ವೇಷ, ಈರ್ಷೆಗೆ ದೇವರನ್ನು ಬಳಸಿಕೊಳ್ಳುವುದು ಧರ್ಮದ ನಡೆಯಂತೂ ಅಲ್ಲ! ದಯೆ, ಪ್ರೇಮ, ನೀತಿ, ಸಹಿಷ್ಣುತೆ ಯಾವುದೇ ಧರ್ಮದ ತಿರುಳು ಎಂಬುದನ್ನು ಕನ್ನಡ ವಾಙ್ಮಯದ ಮಾನವೀಯ ಧ್ವನಿಯೊಂದು 'ಹಿಂಸೆಯಿಲ್ಲದಿರ್ಪುದೆ ಧರ್ಮಂ' ಎಂದು ಹೇಳುತ್ತದೆ.

ನಮ್ಮ ಸಾಮಾಜಿಕ ಸಂಬಂಧಗಳು, ರಾಜಕಾರಣದ ಹಡಾಹುಡಿ, ನೈತಿಕ ಮೌಲ್ಯಗಳು ನಮ್ಮ ಕಲ್ಪನೆಗಳನ್ನೂ ಮೀರಿ ಮಣ್ಣುಪಾಲಾಗುತ್ತಿರುವ ದಿನಗಳಿವು. ಸುಳ್ಳು ಮತ್ತು ನಿರ್ಲಜ್ಜೆ ಎಲ್ಲವನ್ನೂ ಆವರಿಸಿಕೊಳ್ಳುತ್ತಿರುವ ಇಂತಹ ದಿನಗಳಲ್ಲಿ 'ಈಶ್ವರ ಅಲ್ಲಾ ತೇರೆ ನಾಮ್ ಸಬ್‌ಕೋ ಸನ್ಮತಿ ದೇ ಭಗವಾನ್' ಎನ್ನುವುದು ಜೀವದಯಾ ಪರವಾಗಿರುವವರ ನಿತ್ಯದ ಪ್ರಾರ್ಥನೆ. ಆದರೂ ಬರೀ ನಕಾರಾತ್ಮಕತೆಯ ಉಸುಕಿನಲ್ಲಿ ಹುದುಗಿಹೋಗದೆ 'ವಸಂತಕಾಲ ಸರಿದುಹೋದರೆ ಹೋಗಲಿಬಿಡು, ಕಡೇಪಕ್ಷ ಹೂದೋಟದ ಹೊಸತನ, ತಂಗಾಳಿ ನೀಡುವ ಚೈತನ್ಯದ ಬಗ್ಗೆ ಮಾತನಾಡೋಣ' ಗಾಲಿಬ್‌ನ ಭರವಸೆದಾಯಕ ಮಾತುಗಳನ್ನು ಎದೆಗೆ ತುಂಬಿಕೊಳ್ಳುತ್ತಾ ಅಖಿಲ ಜೀವಜಾತಕೆ ಹೊಸತು ಜನ್ಮ ತರುವ ಮತ್ತೊಂದು ವಸಂತದ ಬರುವಿಗಾಗಿ ಕಾಯುವುದರಲ್ಲೇ ಹೊಸತನವಿದೆ.

■ **ಜೆ.ವಿ. ಆನಂದಮೂರ್ತಿ**

## ಮಾತೇ ಮುತ್ತು

- ಮನಸ್ಸೇ ಎಲ್ಲಕ್ಕೂ ಮೂಲ. ಅದನ್ನು ಸರಿಪಡಿಸದ ಹೊರತು ಇನ್ನಾವುದೂ ಸರಿಯಾಗಲಾರದು.

  —ಡಿ.ವಿ.ಜಿ.

- ಇನ್ನೊಬ್ಬರನ್ನು ಅರಿಯುವುದು ಪಾಂಡಿತ್ಯ. ನಮ್ಮನ್ನು ಅರಿತುಕೊಳ್ಳುವುದು ಜ್ಞಾನೋದಯ.

  —ಲಾವೊತ್ಸು

- ನಂಬಿ ಅನುಭವಿಸುವುದಕ್ಕಿಂತ, ಅನುಭವಿಸಿ ನಂಬುವುದೇ ಶಾಶ್ವತ ಮತ್ತು ಸತ್ವ.

  —ಕುವೆಂಪು

- ಸತ್ಯ ದರ್ಶನವಾಗಬೇಕು ಎಂದರೆ ಅಹಂಕಾರ ವಿಸರ್ಜನೆಯಾಗಬೇಕು.

  —ತ.ರಾ. ಸುಬ್ಬರಾವ್

- ಮರ್ತ್ಯದಲ್ಲಿ ನಿಂತು ಗೆಲ್ಲು, ಮರ್ತ್ಯವೇ ಒರೆಗಲ್ಲು.

  —ವಿ.ಕೃ. ಗೋಕಾಕ

- ಪ್ರಾಣಿ ಜೀವನ ಮಿತವಾದದು, ಮನುಷ್ಯ ಜೀವನ ಬಹುಮುಖವಾದುದು.

  —ಶಿವರಾಮ ಕಾರಂತ

- ಬದುಕು ಎನ್ನುವುದು ಬೈಸಿಕಲ್‌ನಂತೆ. ನಿಮ್ಮ ಸಮತೋಲನವನ್ನು ಉಳಿಸಿಕೊಳ್ಳಬೇಕೆಂದರೆ ಸೈಕಲ್ ತುಳಿಯುತ್ತಲೇ ಇರಬೇಕು.

  —ಆಲ್ಬರ್ಟ್ ಐನ್‌ಸ್ಟೀನ್

- ಯಾರ ಯೋಗ್ಯತೆಯನ್ನೂ ಅವರ ಲೋಪಗಳ ಆಧಾರದಿಂದ ನಿರ್ಣಯಿಸಬಾರದು.

  —ಸ್ವಾಮಿ ವಿವೇಕಾನಂದ

- ಜ್ಞಾನಕ್ಕೆ ವಿದ್ಯೆಯೂ , ವಿದ್ಯೆಗೆ ಓದು ಬರಹವೂ ತಳಹದಿ

  —ಬಿ.ಎಂ. ಶ್ರೀಕಂಠಯ್ಯ.